॥ ಕಾಯಕವೇ ಕೈಲಾಸ ॥


# ಶ್ರೀ ಸಿದ್ಧಲಿಂಗೇಶ್ವರ ಅನಾಥಾಲಯ, ಶ್ರೀ ಸಿದ್ಧಗಂಗಾ ಮಠ, ತುಮಕೂರು ಜಿಲ್ಲೆ –572 104.

**ಶ್ರೀ ಶ್ರೀ ಸಿದ್ಧಲಿಂಗಸ್ವಾಮಿಗಳು**
ಅಧ್ಯಕ್ಷರು

☎ : 0816- 2955059
E-mail : ssmathaccount@gmail.com


ಕ್ರ.ಸಂ. ಸಿ.ಅ. : 19/2025-26

ದಿನಾಂಕ : 28-03-2026

## ಪ್ರಕಟಣೆ

ಶ್ರೀಸಿದ್ಧಲಿಂಗೇಶ್ವರ ಅನಾಥಾಲಯ, ಶ್ರೀ ಸಿದ್ಧಗಂಗಾಮಠ, ತುಮಕೂರು ಜಿಲ್ಲೆ - ಇದರ 2026-27ನೇ ಸಾಲಿಗೆ ಅರ್ಜಿಗಳನ್ನು ದಿನಾಂಕ 02-05-2026 ರಿಂದ ದಿನಾಂಕ 15-05-2026ರ ವರೆಗೆ ಕೊಡಲಾಗುವುದು. ಶ್ರೀ ಸಿದ್ಧಲಿಂಗೇಶ್ವರ ಅನಾಥಾಲಯಕ್ಕೆ ಹೊಸದಾಗಿ 3ನೇ ತರಗತಿಯಿಂದ 7ನೇ ತರಗತಿವರೆಗೆ ಕನ್ನಡ ಮಾಧ್ಯಮದಲ್ಲಿ ಹಾಗೂ 8ನೇ ತರಗತಿ ಮತ್ತು 9ನೇ ತರಗತಿಗೆ ಕನ್ನಡ / ಆಂಗ್ಲ ಮಾಧ್ಯಮದಲ್ಲಿ ವಿದ್ಯಾಭ್ಯಾಸ ಮಾಡಬಯಸುವ ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳು **(ಬಾಲಕರಿಗೆ ಮಾತ್ರ)** ಖುದ್ದಾಗಿ ಬಂದು ಶ್ರೀ ಮಠದ ಲೆಕ್ಕಪತ್ರ ವಿಭಾಗದಲ್ಲಿ ಅರ್ಜಿಯನ್ನು ಪಡೆಯುವುದು. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಆದ್ಯತೆಯನ್ನು ನೀಡಲಾಗುವುದು.

ಸರಿಯಾಗಿ ಭರ್ತಿ ಮಾಡಿದ ಪ್ರವೇಶ ಅರ್ಜಿಯ ಜೊತೆಗೆ ಆಯಾ ತಾಲ್ಲೂಕಿನ ತಹಶೀಲ್ದಾರರಿಂದ ನಿಗದಿತ ನಮೂನೆಯಲ್ಲಿ ಧೃಢೀಕರಿಸಲ್ಪಟ್ಟ ವಾರ್ಷಿಕ ವರಮಾನದ ಆದಾಯ ಪತ್ರ ಮತ್ತು ಜಾತಿ ಧೃಢೀಕರಣ ಪತ್ರವನ್ನು ಸಲ್ಲಿಸುವುದು, ಆದಾಯ ಧೃಢೀಕರಣ ಪತ್ರವು ಐದು ವರ್ಷಕ್ಕಿಂತ ಮೀರಿರಬಾರದು. ಪ್ರವೇಶವನ್ನು ಅಪೇಕ್ಷಿಸುವ ವಿದ್ಯಾರ್ಥಿಗಳು ಸಂದರ್ಶನದ ದಿನಾಂಕ 29.05.2026 ರಿಂದ ಪ್ರಾರಂಭವಾಗಿ ದಿನಾಂಕ 05-06-2026ರ ವರೆಗೆ ನಡೆಯುವುದು. ಈ ದಿನಾಂಕಗಳಲ್ಲಿ ವಿದ್ಯಾರ್ಥಿ ಮತ್ತು ಪೋಷಕರು ಖುದ್ದಾಗಿ ಬಂದು ಅಧ್ಯಕ್ಷರ ಸಂದರ್ಶನದಲ್ಲಿ ಪಾಲ್ಗೊಂಡು ನೇರವಾಗಿ ದಾಖಲಾತಿಯನ್ನು ಪಡೆಯುವುದು. ಇದಕ್ಕೆ ಪ್ರತ್ಯೇಕವಾದ ಸಂದರ್ಶನದ ಪತ್ರಗಳನ್ನು ಕಳುಹಿಸಿಕೊಡಲಾಗುವುದಿಲ್ಲ. ಪ್ರವೇಶದ ಅರ್ಜಿಗಳನ್ನು ಆನ್ಲೈನ್ (Online) ನಲ್ಲಿ ಪಡೆಯಲು ಅವಕಾಶವಿರುವುದಿಲ್ಲ.

(ಶ್ರೀ ಸಿದ್ಧಲಿಂಗಸ್ವಾಮಿಗಳು)
ಅಧ್ಯಕ್ಷರು
ಶ್ರೀ ಸಿದ್ಧಲಿಂಗೇಶ್ವರ ಅನಾಥಾಲಯ,
ಶ್ರೀ ಸಿದ್ಧಗಂಗಾ ಮಠ,
ತುಮಕೂರು ತಾಲ್ಲೂಕು/ಜಿಲ್ಲೆ

**ಅನಾಥಾಲಯದ ಪ್ರವೇಶದ ಅರ್ಜಿಯ ಜೊತೆ ಲಗತ್ತಿಸಬೇಕಾದ ದಾಖಲಾತಿಗಳು:**

1) ವಿದ್ಯಾರ್ಥಿಯ ಜಾತಿ ಹಾಗೂ ಆದಾಯ ಪ್ರಮಾಣ ಪತ್ರ **(ಐದು ವರ್ಷಕ್ಕೆ ಮೀರಿರಬಾರದು)** ಜೆರಾಕ್ಸ್ ಪ್ರತಿ-1
2) ವಿದ್ಯಾರ್ಥಿಯ ಇತ್ತೀಚಿನ ಭಾವಚಿತ್ರ -1
3) ವಿದ್ಯಾರ್ಥಿಯ ಆಧಾರ್ ಕಾರ್ಡ್ ಜೆರಾಕ್ಸ್ ಪ್ರತಿ-1
4) ವಿದ್ಯಾರ್ಥಿಯು ದಾಖಲಾತಿಗೆ ಬರುವಾಗ ಕಡ್ಡಾಯವಾಗಿ ಪೆಟ್ಟಿಗೆ (ಟ್ರಂಕ್) ತರುವುದು.

**ಪ್ರತ್ಯೇಕವಾಗಿ ಶಾಲೆ ಮತ್ತು ಸಂಸ್ಕೃತ ಪ್ರವೇಶದ ಅರ್ಜಿಯ ಜೊತೆ ಲಗತ್ತಿಸಬೇಕಾದ ದಾಖಲಾತಿಗಳು:**

1) ಶಾಲಾ ಡೈಸ್ ಸಂಖ್ಯೆ
2) ವಿದ್ಯಾರ್ಥಿಯ ಐಡಿ ಸಂಖ್ಯೆ
3) ವಿದ್ಯಾರ್ಥಿಯ ಜಾತಿ ಹಾಗೂ ಆದಾಯ ಪ್ರಮಾಣ ಪತ್ರ (ಐದು ವರ್ಷಕ್ಕೆ ಮೀರಿರಬಾರದು) ಜೆರಾಕ್ಸ್ ಪ್ರತಿ-2
4) ವಿದ್ಯಾರ್ಥಿಯ ಇತ್ತೀಚಿನ ಭಾವಚಿತ್ರ - 4
5) ವಿದ್ಯಾರ್ಥಿಯ ಬ್ಯಾಂಕ್ ಖಾತೆ ಜೆರಾಕ್ಸ್ ಪ್ರತಿ-1
6) ವಿದ್ಯಾರ್ಥಿ ಮತ್ತು ವಿದ್ಯಾರ್ಥಿಯ ತಂದೆ, ತಾಯಿಯ ಆಧಾರ್ ಕಾರ್ಡ್ ಜೆರಾಕ್ಸ್ ಪ್ರತಿ-2
7) ಆಹಾರ ಪಡಿತರಕಾರ್ಡ್ ಜೆರಾಕ್ಸ್ ಪ್ರತಿ-2
8) ಮೂಲ ಆನ್‌ಲೈನ್ ಟಿ.ಸಿ. ಮತ್ತು ಅಂಕಪಟ್ಟಿ (ಜೆರಾಕ್ಸ್ ಪ್ರತಿ-2)

(ಪೋಷಕರುವಿದ್ಯಾರ್ಥಿಯನ್ನು ದಾಖಲಾತಿ ಮಾಡಲು ಬರುವಾಗ ಮೇಲ್ಕಂಡ ಮಾಹಿತಿಗಳನ್ನು ಕಡ್ಡಾಯವಾಗಿ ತರುವುದು)